ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹ ಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ವಿದ್ಯಾರ್ಥಿಗಳ ಸಂಖ್ಯೆ ೨೬,೫೭೭

ಶಿಕ್ಷಕರ ಸಂಖ್ಯೆ ೫೧೭

ಆ) ನಿಜ. ೩೭ ಕನ್ನಡ ಶಿಕ್ಷಕರು. ಹಾಗೂ ೩ ಉರ್ದು ಶಿಕ್ಷಕರ ಕೊರತೆ ಇದೆ. ಈ ಹುದ್ದೆಗಳನ್ನು ಗುತ್ತಿಗೆ ಆಧಾರದ ಅಭ್ಯರ್ಥಿಗಳ ನೇಮಕಾತಿಯಿಂದ ಶೀಘ್ರವಾಗಿ ಭರ್ತಿ ಮಾಡಲಾಗುವುದು.

ಸಿಂದಗಿ ತಾಲ್ಲೂಕಿನಲ್ಲಿ ಶಾಲಾ ಕೊಠಡಿಗಳನ್ನು ದುರಸ್ತಿಗೊಳಿಸುವುದು

೭೧೨ (೧೫೨೧) ಶ್ರೀ ಮಲ್ಲನಗೌಡ ಬಿರಾದಾರ್ (ಸಿಂದಗಿ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸಿಂಧಗಿ ತಾಲ್ಲೂಕಿನಲ್ಲಿ ಅಪೂರ್ಣವಾದ ಶಾಲಾ ಕೋಣೆಗಳ ಸಂಖ್ಯೆ ಎಷ್ಟು ? ಹಾಗೂ ತೀವ್ರ ದುರಸ್ತಿ ಹಾಗೂ ಸಾಮಾನ್ಯ ದುರಸ್ತಿಯಲ್ಲಿರುವ ಕೋಣೆಗಳ ಸಂಖ್ಯೆ ಎಷ್ಟು ?

ಆ) ಇವು ಎಷ್ಟು ವರ್ಷಗಳಿಂದ ಈ ಸ್ಥಿತಿಯಲ್ಲಿವೆ ಹಾಗೂ ಈ ರೀತಿ ಉಳಿಯಲು ಕಾರಣವೇನು ?

ಇ) ಇದನ್ನು ತೀವ್ರ ಮುಗಿಸುವ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮ ಏನು ?

ಈ) ಈ ಎಲ್ಲ ಕಟ್ಟಡಗಳನ್ನು ಪೂರ್ತಿಗೊಳಿಸಲು ಸರ್ಕಾರಕ್ಕೆ ಬೇಕಾಗುವ ಅವಧಿ ಹಾಗೂ ಹಣದ ಮೊತ್ತ ಎಷ್ಟು ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) (೧) ಅಪೂರ್ಣವಾದ ಶಾಲಾ ಕೋಣೆಗಳ ಸಂಖ್ಯೆ — ೪೭

(೨) ತೀವ್ರ ದುರಸ್ತಿಯಲ್ಲಿರುವ ಕೋಣೆಗಳ ಸಂಖ್ಯೆ — ೩೧

(೩) ಸಾಮಾನ್ಯ ದುರಸ್ತಿಯಲ್ಲಿರುವ ಕೋಣೆಗಳ ಸಂಖ್ಯೆ — ೩೬

ಆ) ಇವುಗಳು ೧೯೭೮-೮೦ನಿಂದ ಅಪೂರ್ಣ ಇರುತ್ತವೆ. ಸರ್ಕಾರದ ಗಾತ್ರಿಟ್ ಮತ್ತು ಸಾರ್ವಜನಿಕರ ಮಂತಿಗೆ ಸಾಲದೇ ಇರುವುದರಿಂದ ಮತ್ತು ಕೆಲವು ಶಾಲೆಗಳ ಕೋಣೆಗಳು ಗುತ್ತಿಗೆದಾರರು ಹಾಗೂ ಗ್ರಾಮ ಮಂಡಳಿಗಳ ಅನಾಸಕ್ತಿಯಿಂದ ಅಪೂರ್ಣವಾಗಿ ಉಳಿದಿರುತ್ತವೆ.

ಇ) ಅಪೂರ್ಣ ಶಾಲಾ ಕೋಣೆಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಪೂರ್ತಿಗೊಳಿಸಲು ವಿಶೇಷ ಜಿಲ್ಲಾಧಿಕಾರಿಗಳು (ಅಭಿವೃದ್ಧಿ) ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಿಜಾಪುರ ಇವರಿಗೆ ತಿಳಿಸಲಾಗಿದೆ.

ಈ) ಈ ಎಲ್ಲ ಕೋಣೆಗಳನ್ನು ಪೂರ್ತಿಗೊಳಿಸಲು ೪,೪೩,೦೦೦ ರೂ.ಗಳ ಆವಶ್ಯಕತೆಯಿದೆ. ಎಲ್ಲಾ ಹಣವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಿದರೆ ೬ ರಿಂದ ೯ ತಿಂಗಳೊಳಗಾಗಿ ಪೂರ್ಣ ಗೊಳಿಸ ಬಹುದು.

Establishment of Forest School in Ranebennur Taluk

713 (1335) SRI K. B. KOLIWAD (Ranebennur).—Will the Minister of State for Agriculture be pleased to State :—

a) Whether there are any representation to the Government to establish a Forest College at Dharwad and a forest School at Hanumanahatti in Ranebennur Taluk?